ಆ) ಈ ದೇವಾಲಯವು ರಾಜ್ಯ ಪ್ರಾಚ್ಯವಸ್ತು ಇಲಾಖೆಯ ಸಂರಕ್ಷಿತ ಸ್ಮಾರಕವಾಗಿರುವುದರಿಂದ ಗೋಪುರ ದುರಸ್ಥಿ ಕಾರ್ಯವನ್ನು ಪ್ರಾಚ್ಯವಸ್ತು ಇಲಾಖೆಯ ವತಿಯಿಂದ ನಿರ್ವಹಿಸಬೇಕಾಗಿರುತ್ತದೆ.

ಸಾಮಾನ್ಯ ಯೋಜನೆಯಡಿ, ಅನುಪಯುಕ್ತ ಅನುದಾನದಿಂದ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ₹ 25.00 ಲಕ್ಷಗಳ ಅನುದಾನವನ್ನು ಮುಜರಾಯಿ ಮತ್ತು ಮುಜರಾಯೇತರ ದೇವಾಲಯಗಳ ಅಭಿವೃದ್ಧಿ/ಜೀರ್ಣೋದ್ಧಾರಕ್ಕಾಗಿ ಬಿಡುಗಡೆ ಮಾಡಿದ್ದು, ಮಾನ್ಯ ಶಾಸಕರು ಆದ್ಯತೆ ಮೇರೆಗೆ ಪರಿಶೀಲಿಸಿ ಈ ದೇವಾಲಯಕ್ಕೆ ಅನುದಾನ ಬಿಡುಗಡೆ ಮಾಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಿ ಅಭಿವೃದ್ಧಿ ಕಾಮಗಾರಿಯನ್ನು ರಾಜ್ಯ ಪ್ರಾಚ್ಯವಸ್ತು ಇಲಾಖೆಯವರ ಸಹಮತಿ/ಅನುಮತಿಯೊಂದಿಗೆ ಕೈಗೊಳ್ಳಬಹುದಾಗಿದೆ.

ಐ.ಟಿ.ಐ ಕಾಲೇಜುಗಳ ಮಂಜೂರಾತಿ

2024(2171); ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)

ಅ) ಮಾಗಡಿ ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರಿ ಐಟಿಐ ಕಾಲೇಜುಗಳ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಯಾವ್ಯಾವ ಸ್ಥಳಗಳಲ್ಲಿ ಅವಶ್ಯಕತೆಗಳಿಗೆ; ಈಗಾಗಲೆ ಯಾವ್ಯಾವ ಸ್ಥಳಗಳಿಗೆ ಐಟಿಐ ಕಾಲೇಜುಗಳನ್ನು ಮಂಜೂರು ಮಾಡಲಾಗಿದೆ; ಯಾವ್ಯಾವ ವರ್ಷಗಳಲ್ಲಿ ಮಂಜೂರು ಮಾಡಲಾಗಿದೆ;

ಇ) ಬೇಡಿಕೆ ಇರುವ ಸ್ಥಳಗಳಿಗೆ ಯಾವ ಕಾಲಮಿತಿಯಲ್ಲಿ ಐ.ಟಿ.ಐ. ಕಾಲೇಜುಗಳನ್ನು ಮಂಜೂರು ಮಾಡಲಾಗುವುದು?

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕರ್ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಹೌದು.

Yes.

ಆ) ಮಾಗಡಿ ಕ್ಷೇತ್ರದಲ್ಲಿ 2007–08ನೇ ಸಾಲಿನಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸಲಾಗಿದೆ.

In the year 2007-08, Government Industrial Training Institute as Magadi has been started.

ಇ) ಸ್ಥಳೀಯ ಅಗತ್ಯತೆ ಬೇಡಿಕೆ ಮತ್ತು ಅನುಧಾನದ ಲಭ್ಯತೆ ಆಧರಿಸಿ ಹೊಸ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು.

Setting up of new Industrial Training Centers will be based on necessity, local demand and availability of the budget.

ಆನೆ ಮತ್ತು ಚಿರತೆಗಳ ದಾಳಿ

2025(2172); ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)

ಅ) ರಾಮನಗರ ತಾಲ್ಲೂಕು ಮತ್ತು ಮಾಗಡಿ ತಾಲ್ಲೂಕಿನಲ್ಲಿ ಆನೆ ಮತ್ತು ಚಿರತೆ ದಾಳಿಗಳು ನಡೆದಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ; ಹಾಗಾದರೆ ಎಷ್ಟು ಕಡೆಗಳಲ್ಲಿ ದಾಳಿ ನಡೆದಿವೆ;

ಆ) ಆನೆ ಮತ್ತು ಚಿರತೆ ದಾಳಿಯಿಂದ ಎಷ್ಟು ಜನ ಮೃತಪಟ್ಟಿದ್ದಾರೆ; ಯಾರ್ಯಾರು ಮೃತಪಟ್ಟಿದ್ದಾರೆ (ವಿವರ ನೀಡುವುದು);

ಇ) ಆನೆ ಮತ್ತು ಚಿರತೆ ದಾಳಿಗಳಿಂದ ಎಷ್ಟು ಪ್ರಾಣಿಗಳು ಬಲಿಯಾಗಿವೆ; ಎಷ್ಟು ಬೆಳೆ ನಾಶವಾಗಿದೆ;

ಈ) ಮೃತಪಟ್ಟವರಿಗೆ, ಬಲಿಯಾದ ಪ್ರಾಣಿಗಳಿಗೆ ಮತ್ತು ನಾಶವಾದ ಬೆಳೆಗಳಿಗೆ ಪರಿಹಾರವನ್ನು ನೀಡಲಾಗಿದೆಯೇ; ಹಾಗಾದರೆ, ಯಾರ್ಯಾರಿಗೆ ಎಷ್ಟೆಷ್ಟು ಪರಿಹಾರವನ್ನು ನೀಡಲಾಗಿದೆ (ವಿವರಗಳನ್ನು ನೀಡುವುದು)?